## ವಿಶೇಷ ಸೂಚನೆ :

• ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ತೆರಳಲು ಚನ್ನಗಿರಿ ಮುಖ್ಯ ಬಸ್ ನಿಲ್ದಾಣದಿಂದ ಮತ್ತು ಚನ್ನಗಿರಿಯ ಕೈಮರ ಸರ್ಕಲ್ ನಿಂದ ಉಚಿತ ಬಸ್ ಸೌಲಭ್ಯ ಇರುತ್ತದೆ. [ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರಿಗೆ *8 AM* ಗಂಟೆ ಇಂದ *9.30 AM* ರ ವರೆಗೆ ಹಾಗೂ ಆಂತರಿಕ ಲೆಕ್ಕ ಪರಿಶೋಧಕರು, ಸಿವಿಲ್ ಇಂಜಿನಿಯರ್, ಮತ್ತು ಸೆಕ್ಯುರಿಟಿ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದವರಿಗೆ *12.30 PM* ರಿಂದ *1.30 PM* ರ ವರೆಗೆ ಮಾತ್ರ ಬಸ್ ಸೌಲಭ್ಯ ಇರುತ್ತದೆ.]

• ಪರೀಕ್ಷೆ ಬರೆಯಲು ಬರುವ ಪರೀಕ್ಷಾರ್ಥಿಗಳಿಗೆ ಬೆಳಿಗ್ಗೆ ಉಪಹಾರ ಹಾಗೂ ಮಧ್ಯಾಹ್ನದ ಊಟದ ವ್ಯವಸ್ಥೆ ಇರುತ್ತದೆ.

1. ಅಭ್ಯರ್ಥಿಗಳು ಭಾವಚಿತ್ರವುಳ್ಳ ಗುರುತಿನ ಚೀಟಿಯನ್ನು( ಆಧಾರ್ ಕಾರ್ಡ್ ಅಥವಾ ಚುನಾವಣಾ ಗುರುತಿನ ಚೀಟಿ) ಕಡ್ಡಾಯವಾಗಿ ತರಲು ಸೂಚಿಸಲಾಗಿದೆ.

2. ಅಭ್ಯರ್ಥಿಗಳು ತಮ್ಮ ಸ್ಥಾನವನ್ನು ತಿಳಿದುಕೊಳ್ಳುವುದಕ್ಕಾಗಿ ಪರೀಕ್ಷೆ ಪ್ರಾರಂಭವಾಗುವ *60* ನಿಮಿಷಗಳ ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಲು ಸಲಹೆ ನೀಡಲಾಗಿದೆ. ಪರೀಕ್ಷಾ ಪ್ರಾರಂಭಕ್ಕೆ *30* ನಿಮಿಷ ಮುಂಚಿತವಾಗಿ ಅಭ್ಯರ್ಥಿಯು ಪರೀಕ್ಷಾ ಕೊಠಡಿಯೊಳಗೆ ಹಾಜರಾಗಬೇಕು. ಪರೀಕ್ಷೆ ಪ್ರಾರಂಭವಾದ *5* ನಿಮಿಷಗಳ ನಂತರ ಬರುವ ಯಾವುದೇ ಅಭ್ಯರ್ಥಿಗೆ ಪರೀಕ್ಷಾ ಕೊಠಡಿಗೆ ಪ್ರವೇಶ ನೀಡಲಾಗುವುದಿಲ್ಲ. ಪರೀಕ್ಷೆಗೆ ನಿಗದಿಪಡಿಸಿದ ಪೂರ್ಣ ಅವಧಿಯು ಮುಗಿಯುವವರೆಗೆ ಯಾವುದೇ ಅಭ್ಯರ್ಥಿಯು ಹೊರ ಹೋಗುವಂತಿಲ್ಲ.

3. ಪರೀಕ್ಷಾ ಕೊಠಡಿಯೊಳಗೆ ಯಾವುದೇ ಇತರೆ ನಕಲು ವಸ್ತು, ಪೇಜರ್ಸ್ ಮೊಬೈಲ್ ಫೋನ್ಸ್, ಕ್ಯಾಲ್ಕೂಲೇಟರ್ ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ರಿಸ್ಟ್‌ವಾಚ್ ಇತ್ಯಾದಿ ಸೇರಿದಂತೆ ಪುಸ್ತಕಗಳು, ಕಾಪಿ ಚೀಟಿಗಳು, ಟಿಪ್ಪಣಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ. ಯಾವುದೇ ನಕಲು ವಸ್ತುಗಳು ಇಟ್ಟು ಕೊಂಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದು ಪಡಿಸಲಾಗುವುದು.

4. ಪ್ರವೇಶ ಪತ್ರದಲ್ಲಿ ಅಭ್ಯರ್ಥಿಯ ಭಾವಚಿತ್ರ ಮುದ್ರಿತವಾಗದಿದ್ದಲ್ಲಿ ಅಥವಾ ಸ್ಪಷ್ಟವಾಗಿಲ್ಲದಿದ್ದಲ್ಲಿ, ಅಭ್ಯರ್ಥಿಯು ಪರೀಕ್ಷಾ ದಿನದಂದು ಪ್ರವೇಶ ಪತ್ರದೊಂದಿಗೆ ಎರಡು ಸ್ಟಾಂಪ್ ಅಳತೆಯ*(Stamp size)* ಭಾವಚಿತ್ರಗಳನ್ನು ಕಡ್ಡಾಯವಾಗಿ ತರತಕ್ಕದ್ದು.

ಭಾವಚಿತ್ರಗಳನ್ನು ಸಂವೀಕ್ಷಕರಿಗೆ ನೀಡಿ ನಾಮಿನಲ್ ರೋಲ್ನಲ್ಲಿನ ನಿಗದಿತ ಅಂಕಣದಲ್ಲಿ ಅಂಟಿಸಿ ದೃಢೀಕರಿಸುವಂತೆ ತಿಳಿಸುವುದು.